ಶಾಸ್ತ್ರದ ವಿಧವೆ ಬರುತ್ತಿದ್ದಳು. ಅವಳ ಬಗ್ಗೆ ನನ್ನ ಅಮ್ಮ ಮತ್ತು ಅಕ್ಕಂದಿರು ಗುಟ್ಟಾಗಿ ಏನೊ ಪಿಸುದನಿಯಲ್ಲಿ ಮಾತಾಡುತ್ತಿದ್ದರು; ಮರುದಿನ ಅವಳು ಹೊರಟು ಹೋದ ನಂತರ, 'ಅವಳಿಗೆ ಘಟಶ್ರಾದ್ಧ ಮಾಡಿದ್ದಾರಂತೆ' ಎಂದರು. ಅದರ ವಿವರವನ್ನು ಅಮ್ಮನಿಂದ ಕೇಳಿದ ಮೇಲೆ ಆ ಪಾಪದ ವಿಧವೆಯ ಮೇಲೆ ಕಥೆ ಬರೆಯುವ ಉಮೇದಿ ಬಂತು. ಆದರೆ, ಅದೇ ಹೆಸರಿನ ಅನಂತಮೂರ್ತಿಯವರ ಕಥೆ ಓದಿದಾಗ ಅಚ್ಚರಿಯಾಯಿತು; ಅಲ್ಲಿ ನಿರೂಪಿತವಾದ ಹಲವು ವಿವರಗಳು, ಘಟನೆಗಳು, ಪಾತ್ರಗಳು ಅಕ್ಷರಶಃ ನಿಜವಾಗಿದ್ದವು ನನ್ನ ಪಾಲಿಗೆ. ನಾನು ಬರೆಯಬೇಕೆಂದು ಕಲ್ಪಿಸಿಕೊಂಡ ಕಥೆ ಅನಂತಮೂರ್ತಿಯವರ 'ಘಟಶ್ರಾದ್ಧ'ಕ್ಕಿಂತ ಬೇರೆಯಾಗಿತ್ತು; ಆದರೆ ಮುಂದಿನ ದಿನಗಳಲ್ಲಿ ಕಥೆಗೆ ಇಂಥ ವಸ್ತುಗಳು ಆಯ್ದುಕೊಳ್ಳಬಹುದಲ್ಲ ಎಂದನಿಸಿತು. 'ಪ್ರಶ್ನೆ'ಯ ರಂಗನಾಥ, ಶಂಕ್ರಯ್ಯ, ಶಾರದೆ ಕೇವಲ ಪಾತ್ರಗಳಾಗಿರದೆ ನಾನು ದೈನಿಕದಲ್ಲಿ ನೋಡುತ್ತಿದ್ದ ನಿಜ ವ್ಯಕ್ತಿಗಳಾಗಿದ್ದರು. ನನ್ನ ಮನೆಯ ಸುತ್ತಲಿನ ಕಾಡನ್ನೂ ಒಳಗೊಂಡ ಜೀವಜಗತ್ತನ್ನೂ ಅನಕ್ಷರಸ್ಥರ ಉಪಖಂಡವನ್ನೂ ನನ್ನೊಳಗೆ ನಾನು ಕಂಡದ್ದು ತೇಜಸ್ವಿಯವರ ಮಂದಣ್ಣ, ಯಂಕ್ಟ, ತುಕ್ಕೋಜಿ, ಸೂರಾಚಾರಿಯಂಥವರ ಮೂಲಕ. ಚಿತ್ತಾಲರ ವಿಷಾದ, ಅನಂತಮೂರ್ತಿಯವರ ಅಸ್ವಸ್ಥ ಪಾತ್ರಗಳು ಮತ್ತು ತೇಜಸ್ವಿಯವರ ಅಸಂಗತ ಲೋಕ ನಿಧಾನವಾಗಿ ನನ್ನೊಳಗಿನ ಕಥೆಗಾರನನ್ನು ರೂಪಿಸಿದವು.

ಕಥೆ ಬರೆದಾದ ನಂತರ ಪ್ರತಿ ಸಲವೂ ಅತೃಪ್ತಿಯಿಂದ ತಳಮಳಿಸಿದ್ದೇನೆ; ಕಲ್ಪನೆಯಲ್ಲಿದ್ದ ಕಥೆ ಅಮೂರ್ತ ಸ್ಥಿತಿಯಲ್ಲಿ ಮೋಹಕವಾಗಿರುತ್ತದೆ; ಬರೆಯುತ್ತಿರುವ ಕ್ಷಣದಲ್ಲಿ ಮೊದಲಿನ ಚೆಲುವು, ಭರವಸೆ ಕರಗುತ್ತ ಅಸಂತುಷ್ಟನಾಗುತ್ತೇನೆ; ಬರೆದ ನಂತರ ನಾನೊಬ್ಬ ಓದುಗನಾಗಿ ಓದುವಾಗ ಏನೋ ಕೊರತೆಯಿದೆ ಎಂದನಿಸಿ ಕಿರಿಕಿರಿಯಾಗುತ್ತದೆ; ಏನೇ ಅನಿಸಿದರೂ ಹುಟ್ಟಿದ ಮಕ್ಕಳನ್ನು ಕಟ್ಟಿದ ಮನೆಯನ್ನು ಅವು ಇರುವಂತೆ ಒಪ್ಪಿಕೊಳ್ಳುವಂತೆ ಸ್ವೀಕರಿಸಿಬಿಡುತ್ತೇನೆ; ಮತ್ತೊಮ್ಮೆ ಬರೆಯಲಾರೆ; ಬರೆದರೂ ಅದು ಬೇರೆಯೇ ಆದ ಕಥೆಯಾದೀತು; ಅಷ್ಟರಮಟ್ಟಿಗೆ ಕಥೆಯ ಸ್ವಾಯತ್ತತೆಯನ್ನು ನಾನು ಗೌರವಿಸುತ್ತೇನೆ.

ಕಥೆಗಾರನಲ್ಲಿ ಕಥೆಯ ಪಠ್ಯವಿರುವಂತೆ ಓದುಗನಲ್ಲೂ ಅವನ ಅನುಭವದ ಪಠ್ಯವಿರುತ್ತದೆ; ಬರೆದವನ ಮತ್ತು ಓದುಗನ ಸಂಗಮ ಬಿಂದು ಎಲ್ಲಿರುತ್ತದೆ ಎಂದು ಖಚಿತವಾಗಿ ಹೇಳಲಾರೆ; ನನ್ನನುಭವ ಓದುಗನದು ಆಗುವಂತೆ ಓದುಗನ ಅನುಭವ ನನ್ನದೂ ಆಗುವಂತೆ ಕಥೆಯಲ್ಲಿ ಸಾಧ್ಯವಾದರೆ ಅದೃಷ್ಟವೆಂದು ಹೇಳಬೇಕು; ನನ್ನ ಕಥೆಯ ಅಸ್ತಿತ್ವ ಓದುಗನನ್ನು ಅವಲಂಬಿಸಿರುವುದರಿಂದ ಕಥೆಯನ್ನು ಸೃಷ್ಟಿಸುವಲ್ಲಿ ನಾನು ಸ್ವಯಂಪೂರ್ಣ ಸ್ವಯಂಭು ಆಗಲಾರೆ; ಕಥೆಗಾರ ಕಥೆಯನ್ನು ರಚಿಸುತ್ತಾನೆ; ಕಥೆ ಓದುಗನನ್ನು ಸೃಷ್ಟಿಸುತ್ತದೆ ಎನ್ನುವುದರ ಬದಲು ಓದುಗ ಕಥಾ ಪಠ್ಯವನ್ನೂ ಆ ಪಠ್ಯ ಕಥೆಗಾರನನ್ನೂ ಸೃಷ್ಟಿಸುತ್ತದೆ ಎನ್ನವುದೇ ಹೆಚ್ಚು ಸರಿ; ಅಥವ ಅಂತಹ ಆವರ್ತ ಕಥೆಯನ್ನು ಪೂರ್ಣಗೊಳಿಸುತ್ತದೆ. ವಿಮರ್ಶಕ ಸೂಕ್ಷ್ಮ ಓದುಗ; ಕಥೆಗಾರನಿಗೆ ಅವನ ಸಹೃದಯತೆ ಬೇಕೆ ವಿನಃ ಸಹಾನುಭೂತಿಯಲ್ಲ. ಕಥೆ ಸೃಜನಶೀಲ ಸೃಷ್ಟಿಯಾದ್ದರಿಂದ ಕಥೆಗಾರನಿಗೆ ಗೊತ್ತಿರದ ಗುಣಗಳು ಸುಪ್ತವಾಗಿರಬಹುದು; ಆ ಗುಣ ಬೇರೆಯವರ ಮುಖಾಂತರ ಗುರುತಿಸಲ್ಪಟ್ಟಾಗ ಸಹಜವಾಗಿಯೇ ಸಂತೋಷವಾಗುತ್ತದೆ. ತನ್ನ ಮುಕ್ತತೆ, ನಿಗೂಢತೆ ಮತ್ತು ಆಂತರಿಕ ಉಪ ವ್ಯಾಖ್ಯಾನಗಳಿಂದಾಗಿ ಕಥೆ ನಿರಂತರ ಹೊಸ ವಿನ್ಯಾಸವನ್ನು ಓದುಗನಿಗೆ ನೀಡಬೇಕೆಂಬುದು ನನ್ನ ಆಶಯ.

ಕಥೆ ಸೃಷ್ಟಿಯಾಗುವ ಮುನ್ನ ಕಥನ ತಂತ್ರ, ವಸ್ತುಗಳು ಸಿದ್ಧವಾಗಿರುವುದಿಲ್ಲ; ಮನೆ ಕಟ್ಟುವ